ಅಧೀಕ್ಷಕಅಭಿಯಂತರರು(ವಿ), ರವರಕಛೇರಿ,
ಕಾ&ಪಾ ವೃತ್ತ, ಹೆಸ್ಕಾಂ, 6ನೆ ಸೆಕ್ಟರ್ 6ನೆ ಕ್ರಾಸ್,
ನವನಗರ, ಬಾಗಲಕೋಟ- 587103.
Phone No: 08354 297230.
E-mail
ID:seebgkt.hescom@gmail.com

Superintending Engineer (Ele),
O & M Circle, HESCOM,
6th SECTOR 6th Cross,
Navanagar, Bagalkot-587103
Phone No: 08354 297230.
E-mail ID:seebgkt.hescom@gmail.com

Corporate Identity Number(CIN): U31401KA2002SGC030437

ಕ್ರ.ಸಂಖ್ಯೆ: ಅಇಕ/ಅಅ(ವಿ)/ಉಲೆನಿ/ಸಲೆ/ಹಿಸ-1/ಸ-2/2021-22/ 3675 ದಿನಾಂಕ: 30.07.2021

# ಪ್ರಕಟಣೆ

"ಮೈಕ್ರೋ ಫೀಡರ್ ಫ್ರಾಂಚೈಸಿ " ರವರನ್ನು ನೇಮಕ ಮಾಡಿಕೊಳ್ಳುವುದು.

********

ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ, ಬಾಗಲಕೋಟ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಮೈಕ್ರೋ ಫೀಡರ್ ಫ್ರಾಂಚೈಸಿಯನ್ನು ಹುವಿಸಕಂನಿಯು ತನ್ನ ವಿದ್ಯುತ್ ಆದಾಯ ವಸೂಲಾತಿ ಮಾಡುವುದಕ್ಕೆ ಪ್ರೋತ್ಸಾಹ ಧನ (Incentive) ಆಧಾರದ ಮೇಲೆ ಗೊತ್ತು ಮಾಡುವುದಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಮೈಕ್ರೋ ಫೀಡರ್ ಫ್ರಾಂಚೈಸಿಯು ಪ್ರತಿ ತಿಂಗಳಿಗೆ ಎಲ್ಲಾ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ರೂ. 12,000/- (ಹನ್ನೆರಡು ಸಾವಿರ ರೂಗಳು ಮಾತ್ರ) ವನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ"ವಾಗಿ ನೀಡಲಾಗುವುದು. ಎಮ್.ಎಫ್.ಎಫ್ ಗಳ ಕಾರ್ಯನಿರ್ವಹಣೆಯ ಆಧಾರದ ಮೇಲೆ ಸಂಭಾವನೆ ನೀಡಲಾಗುವುದು.

**ಮೈಕ್ರೋ ಫೀಡರ್ ಫ್ರಾಂಚೈಸಿ ಸ್ಥಾನಗಳು ಖಾಲಿ ಇರುವ ಗ್ರಾಮ ಪಂಚಾಯಿತಿಗಳ ವಿವರ.**

| ಕ್ರಮ ಸಂ. | ಖಾಲಿ ಇರುವ ಗ್ರಾಮ ಪಂಚಾಯಿತಿಯ ಹೆಸರು | ವಿಭಾಗದ ಹೆಸರು | ಉಪ ವಿಭಾಗದ ಹೆಸರು | ಗೊತ್ತು ಮಾಡಿಕೊಳ್ಳುವ ಪ್ರಾಧಿಕಾರಿ(ವೃತ್ತದ ಹೆಸರು) | ಖಾಲಿ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಶೀಗಿಕೇರಿ | ಬಾಗಲಕೋಟೆ | ಬಾಗಲಕೋಟೆ ಗ್ರಾಮೀಣ | ಬಾಗಲಕೋಟೆ ವೃತ್ತ | 1 |
| 2 | ಸೀಮಿಕೇರಿ | ಬಾಗಲಕೋಟೆ | ಬಾಗಲಕೋಟೆ ಗ್ರಾಮೀಣ | ಬಾಗಲಕೋಟೆ ವೃತ್ತ | 1 |
| 3 | ಮುಗಳೊಳ್ಳಿ | ಬಾಗಲಕೋಟೆ | ಬಾಗಲಕೋಟೆ ಗ್ರಾಮೀಣ | ಬಾಗಲಕೋಟೆ ವೃತ್ತ | 1 |
| 4 | ಕಲಾದಗಿ (ಹೆಚ್ಚುವರಿ) | ಬಾಗಲಕೋಟೆ | ಬಾಗಲಕೋಟೆ ಗ್ರಾಮೀಣ | ಬಾಗಲಕೋಟೆ ವೃತ್ತ | 1 |
| 5 | ಹಳದೂರ | ಬಾಗಲಕೋಟೆ | ಗುಳೇದಗುಡ್ಡ | ಬಾಗಲಕೋಟೆ ವೃತ್ತ | 1 |
| 6 | ಕಟಗೇರಿ | ಬಾಗಲಕೋಟೆ | ಗುಳೇದಗುಡ್ಡ | ಬಾಗಲಕೋಟೆ ವೃತ್ತ | 1 |
| 7 | ಹಾನಾಪೂರ ಎಸ್‌ಪಿ | ಬಾಗಲಕೋಟೆ | ಗುಳೇದಗುಡ್ಡ | ಬಾಗಲಕೋಟೆ ವೃತ್ತ | 1 |
| 8 | ನೀರಬೂದಿಹಾಳ (ಹೆಚ್ಚುವರಿ) | ಬಾಗಲಕೋಟೆ | ಗುಳೇದಗುಡ್ಡ | ಬಾಗಲಕೋಟೆ ವೃತ್ತ | 1 |
| 9 | ಮಂಗಳಗುಡ್ಡ | ಬಾಗಲಕೋಟೆ | ಬಾದಾಮಿ | ಬಾಗಲಕೋಟೆ ವೃತ್ತ | 1 |
| 10 | ಆಲೂರ ಎಸ್ ಕೆ | ಬಾಗಲಕೋಟೆ | ಬಾದಾಮಿ | ಬಾಗಲಕೋಟೆ ವೃತ್ತ | 1 |

| | | | | | |
|---|---|---|---|---|---|
| 11 | ಆಡಗಲ್ | ಬಾಗಲಕೋಟೆ | ಬಾದಾಮಿ | ಬಾಗಲಕೋಟೆ ವೃತ್ತ | 1 |
| 12 | ನರಸಾಪೂರ | ಬಾಗಲಕೋಟೆ | ಬಾದಾಮಿ | ಬಾಗಲಕೋಟೆ ವೃತ್ತ | 1 |
| 13 | ಕಂದಗಲ್ | ಬಾಗಲಕೋಟೆ | ಇಲಕಲ್ | ಬಾಗಲಕೋಟೆ ವೃತ್ತ | 1 |
| 14 | ಚಿಕ್ಕಕೊಡಗಲಿ | ಬಾಗಲಕೋಟೆ | ಇಲಕಲ್ | ಬಾಗಲಕೋಟೆ ವೃತ್ತ | 1 |
| 15 | ಹಾವರಗಿ | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 16 | ನಾಗೂರ | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 17 | ಹಿರೇಬಾದವಾಡಗಿ | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 18 | ಬಿಸಲದಿನ್ನಿ | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 19 | ಹಿರೇಮಳಗಾವಿ | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 20 | ಗೂಡುರ (ಹೆಚ್ಚುವರಿ) | ಬಾಗಲಕೋಟೆ | ಹುನಗುಂದ | ಬಾಗಲಕೋಟೆ ವೃತ್ತ | 1 |
| 21 | ಹುಲ್ಯಾಳ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 22 | ಹುನ್ನೂರ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 2 |
| 23 | ಕಡಪಟ್ಟಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 24 | ಲಿಂಗನೂರ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 25 | ಮುತ್ತೂರ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 26 | ಸಿದ್ದಾಪೂರ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 27 | ಮರೆಗುದ್ದಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 28 | ಅಡಿಹುಡಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 29 | ಬಿದರಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 2 |
| 30 | ಗೋಠೆ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 31 | ಕಾಜಿಬೀಳಗಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 1 |
| 32 | ಸಾವಳಗಿ | ಜಮಖಂಡಿ | ಜಮಖಂಡಿ | ಬಾಗಲಕೋಟೆ ವೃತ್ತ | 2 |
| 33 | ಹಳಿಂಗಳಿ | ಜಮಖಂಡಿ | ರಬಕವಿ | ಬಾಗಲಕೋಟೆ ವೃತ್ತ | 1 |
| 34 | ನಾವಲಗಿ | ಜಮಖಂಡಿ | ರಬಕವಿ | ಬಾಗಲಕೋಟೆ ವೃತ್ತ | 1 |
| 35 | ಯಲ್ಲಟ್ಟಿ | ಜಮಖಂಡಿ | ರಬಕವಿ | ಬಾಗಲಕೋಟೆ ವೃತ್ತ | 2 |
| 36 | ನಂದಗಾಂವ | ಜಮಖಂಡಿ | ಮಹಾಲಿಂಗಪೂರ | ಬಾಗಲಕೋಟೆ ವೃತ್ತ | 1 |
| 37 | ಗಲಗಾಲ ಜಂಬಗಿ | ಮುಧೋಳ | ಮುಧೋಳ | ಬಾಗಲಕೋಟೆ ವೃತ್ತ | 1 |

| | | | | | |
|---|---|---|---|---|---|
| 38 | ಉತ್ತೂರ | ಮುಧೋಳ | ಮುಧೋಳ | ಬಾಗಲಕೋಟೆ ವೃತ್ತ | 1 |
| 39 | ಹೆಬ್ಬಾಳ | ಮುಧೋಳ | ಲೋಕಾಪೂರ | ಬಾಗಲಕೋಟೆ ವೃತ್ತ | 1 |
| 40 | ಕೊತಿಗ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |
| 41 | ಬಾಡಗಂಡಿ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |
| 42 | ಹೊನ್ನಿಹಾಳ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |
| 43 | ಅರಕೇರಿ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |
| 44 | ಗಲಗಲಿ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |
| 45 | ತೆಗ್ಗಿ | ಮುಧೋಳ | ಬೀಳಗಿ | ಬಾಗಲಕೋಟೆ ವೃತ್ತ | 1 |

**ಅರ್ಹತೆ:**

1. ಮೈಕ್ರೋ ಫೀಡರ್ ಫ್ರಾಂಚೈಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಸಂಬಂಧಿಸಿದ ಆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವಾಸವಾಗಿರಬೇಕು. ವಾಸ ಸ್ಥಳದ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಧಿಕೃತ ಅಧಿಕಾರಿಯಿಂದ ಪಡೆದಿರಬೇಕು.
2. ಒಂದು ವೇಳೆ ಯೋಗ್ಯ ಅಭ್ಯರ್ಥಿಯು ಅದೇ ಗ್ರಾಮ ಪಂಚಾಯತಿಯಲ್ಲಿ ದೊರಕದಿದ್ದರೆ ಹು.ವಿ.ಸ.ಕಂಪನಿ ಆ ಗ್ರಾಮ ಪಂಚಾಯತಿಗೆ, ಪಂಚಾಯತಿಯ ಅಧ್ಯಕ್ಷರ ಅನುಮೋದನೆಯ ಮೇರೆಗೆ ಬೇರೊಂದು ಪಂಚಾಯತಿಯ ಅಭ್ಯರ್ಥಿಯನ್ನು ಆಯ್ಕೆ ಮಾಡುತ್ತದೆ.
3. **ಅಭ್ಯರ್ಥಿಯ ಕನಿಷ್ಟ ವಿದ್ಯಾರ್ಹತೆ** : "ಮೈಕ್ರೋ ಫೀಡರ್ ಫ್ರಾಂಚೈಸಿಗಾಗಿ ಅರ್ಜಿ ಸಲ್ಲಿಸುವ ಅಭ್ಯರ್ಥಿಯು ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರತಕ್ಕದ್ದು.
4. **ಅಭ್ಯರ್ಥಿಯು ದಿನಾಂಕ** : 16-08-2021 ಕ್ಕೆ 18 ರಿಂದ 40 ವರ್ಷ ವಯಸ್ಸಿನ ವಯೋಮಿತಿಯಲ್ಲಿರಬೇಕು.
5. ಅಯ್ಕೆಯಾದ ಅಭ್ಯರ್ಥಿಗಳು ಸಂಬಂಧಪಟ್ಟ ಗ್ರಾಮ ಪಂಚಾಯಿತಿಯ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50,000/- ಅಥವಾ ಗರಿಷ್ಠ 5 ದಿನಗಳ ತಿಂಗಳಿನ ಸರಾಸರಿ ಕಂದಾಯ ಬೇಡಿಕೆ ಪ್ರಮಾಣ, ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ ಹಣವನ್ನು ಬ್ಯಾಂಕ್ ಗ್ಯಾರಂಟಿ ನೀಡಲು ಶಕ್ತರಾಗಿರಬೇಕು. ಸದರಿ ಬ್ಯಾಂಕ್ ಗ್ಯಾರಂಟಿಯು 12+3=15 ತಿಂಗಳ ಅವಧಿಗೆ ಊರ್ಜಿತದಲ್ಲಿರತಕ್ಕದ್ದು. ಸದರಿ ಬ್ಯಾಂಕ್ ಖಾತರಿಯನ್ನು ಹುಬ್ಬಳ್ಳಿ ವಿದ್ಯುತ್ ಸರಬುರಾಜು ಕಂಪನಿಯ ಅವಶ್ಯಕತೆಯಂತೆ ವಿಸ್ತರಿಸಬಹುದಾಗಿದೆ.
6. ಕಂಪನಿ ಕಛೇರಿಯ ಪ್ರತ ಸಂಖ್ಯೆ : ಹುವಿಸಕಂನಿ/ಆ.ಸ/ಉಲೆನಿ(ಕಂ)/BZ&HZ/11-12/CYS-1522 ದಿನಾಂಕ : 15-11-2011 ರಲ್ಲಿ ಮಾಸಿಕ ರೂ. 1.00 (ಒಂದು) ಲಕ್ಷಕ್ಕಿಂತಲೂ ಹೆಚ್ಚು ಬೇಡಿಕೆಯಾಗುವ ಗ್ರಾಮ ಪಂಚಾಯಿತಿಗಳ ಯಾದಿಯನ್ನು ತಯಾರಿಸಿ ಅದರಲ್ಲಿ ಅತೀ ಹೆಚ್ಚು ಬೇಡಿಕೆಯುಳ್ಳ ಶೇ. 20 ರಷ್ಟು ಗ್ರಾಮ ಪಂಚಾಯಿತಿಗಳ ಮೀಟರ್ ರೀಡಿಂಗ್ ಮತ್ತು ವಸೂಲಾತಿ ಕಾರ್ಯವನ್ನು ಕಂಪನಿ ಸಿಬ್ಬಂದಿಗಳಿಂದ ನಿರ್ವಹಿಸಬೇಕಾಗಿರುವುದರಿಂದ ಸದರ ಎಮ್.ಎಫ್.ಎಫ್ ರವರ ಮೇಲೆ ಯಾವುದೇ ದೂರುಗಳು ಇಲ್ಲದಿದ್ದಾಗ್ಯೂ ಒಂದು ವೇಳೆ ವಜಾಗೊಳಿಸಿದ್ದಲ್ಲಿ ಅವರಿಗೂ ಸಹ ಅವರವರ ಜಿಲ್ಲೆಯ ವ್ಯಾಪ್ತಿಯಲ್ಲಿ ಜರುಗುವ ಈ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡುವುದು.
7. "ಮೈಕ್ರೋ ಫೀಡರ್ ಫ್ರಾಂಚ್ಯಾಜಿ"ರವರುಗಳು ಯಾವುದೇ ಸರಕಾರಿ/ಅರೆಸರಕಾರಿ/ಸ್ಥಳೀಯ ಸಂಸ್ಥೆ/ರಾಜಕೀಯ ಸಂಸ್ಥೆಗಳಲ್ಲಿ ಹುದ್ದೆ/ಸ್ಥಾನ ಹೊಂದಿರತಕ್ಕದಲ್ಲ.

8. ಅಭ್ಯರ್ಥಿಯು ಸದೃಢ ದೈಹಿಕ ಸಾಮರ್ಥ್ಯ ಹೊಂದಿರತಕ್ಕದ್ದು

**ಆಯ್ಕೆ ಪ್ರಕ್ರಿಯೆ :**

1. ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಪಡೆದಿರುವ ಗರಿಷ್ಟ ಅಂಕಗಳನ್ವಯ ("ಮೆರಿಟ್ ಆಧಾರದ") ಮೇಲೆ ಗೊತ್ತು ಮಾಡಿಕೊಳ್ಳಲಾಗುವುದು. ಪ್ರತಿ ಗ್ರಾಮ ಪಂಚಾಯತಿಗೆ 1:2 ಅನುಪಾತದಲ್ಲಿ. ಮೂಲ ದಾಖಲಾತಿಗಳ ಪರಿಶೀಲನೆ. ಕರೆಯಲಾಗುವದು.
2. ಮೂಲ ದಾಖಲಾತಿಗಳ ಪರಿಶೀಲನೆ ಮತ್ತು ದೃಢೀಕರಣ.

**ಆಯ್ಕೆ ಸಮಿತಿಯ ಸದಸ್ಯರು :**

ಹು.ವಿ.ಸ.ಕಂಪನಿ ಅಧಿಕಾರಿ ಪ್ರತಿನಿಧಿಗಳು ಮತ್ತು ಆಯಾ ವೃತ್ತದ ಅಧೀಕ್ಷಕ ಇಂಜನೀಯರ (ವಿ), ಉಪಲೆಕ್ಕನಿಯಂತ್ರಣಾಧಿಕಾರಿಗಳು ಆಯಾ ವಿಭಾಗಗಳ ಕಾರ್ಯನಿರ್ವಾಹಕ ಇಂಜನೀಯರ(ವಿ), ಲೆಕ್ಕಾಧಿಕಾರಿಗಳು ಮತ್ತು ಆಯಾ ಉಪವಿಭಾಗಗಳ ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ (ವಿ).

**ಎಮ್. ಎಫ್. ಎಫ್‌ಗಳ ಕಾನೂನುಬದ್ಧ ಸ್ಥಾನಮಾನ :**

1. ಎಮ್. ಎಫ್. ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು ಹುವಿಸಕಂನಿಯ ಒಬ್ಬ ಏಜೆಂಟ್ ಆಗಿ ತನ್ನ ಕಾರ್ಯವ್ಯಾಪ್ತಿ ಪ್ರದೇಶದಲ್ಲಿ ಕಾರ್ಯನಿರ್ವಹಿಸಬೇಕಾಗುತ್ತದೆ ಮತ್ತು ಯಾವುದೇ ಕಾರಣಕ್ಕೂ ಆತನನ್ನು ಹುವಿಸಕಂನಿಯ ನೌಕರನೆಂದು ಪರಿಗಣಿಸಲಾಗುವುದಿಲ್ಲ.
2. ಎಮ್. ಎಫ್. ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ ಡೀಲರ್ ರನ್ನು ನೇಮಕ ಮಾಡಿಕೊಳ್ಳುವಂತಿಲ್ಲ.

**ಮೈಕ್ರೋ ಫೀಡರ್ ಫ್ರಾಂಚ್ಯಾಜಿ ಯ ಜವಾಬ್ದಾರಿಗಳು:-**

1. ಎಲ್.ಟಿ-1, ಎಲ್.ಟಿ-2, ಎಲ್.ಟಿ-3, ಎಲ್.ಟಿ-4[10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-5[40 ಹೆಚ್.ಪಿ ಸಾಮರ್ಥ್ಯದವರೆಗೆ] ಮತ್ತು ಎಲ್.ಟಿ-6 ಪ್ರವರ್ಗದ ಸ್ಥಾವರಗಳ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಮಾಡುವುದು..
2. ಗ್ರಾಹಕರಿಂದ ವಸೂಲು ಮಾಡಿದ ಹಣವನ್ನು ಅದೇ ದಿನ ಅಥವಾ ನಂತರದ ತಕ್ಷಣದ ಕೆಲಸದ ದಿನಾಂಕದಂದು ನಿಗದಿಪಡಿಸಿರುವ ಹುವಿಸಕಂನಿ ಕಛೇರಿ ಅಥವಾ ನಿಯುಕ್ತಿಗೊಳಿಸಿರುವ ಬ್ಯಾಂಕ್‌ನಲ್ಲಿ ಸಂದಾಯ ಮಾಡತಕ್ಕದ್ದು.
3. ದಿನವಹಿ ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸಬೇಕು ಹಾಗೂ ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಸಿಸ್ಟಮ್ ಗೆ ಗಣಕಯಂತ್ರ [Computer] ನಲ್ಲಿ ಅಪ್ ಡೇಟ್ ಮಾಡಬೇಕು.
4. ಎಮ್.ಎಫ್.ಎಫ್ ರವರು ತಾವು ನಿಯಮಿತವಾಗಿ ಮಾಡುವ ಮಾಪಕ ಓದುವಿಕೆ, ಬಿಲ್ ವಿತರಣೆ ಮತ್ತು ಕಂದಾಯ ವಸೂಲಾತಿ ಕಾರ್ಯಗಳಿಗೆ ಯಾವುದೇ ತೊಂದರೆ/ಅಡ್ಡಿಯಿಲ್ಲದ ರೀತಿಯಲ್ಲಿ ಗ್ರಾಹಕರ ಸ್ಥಾವರಗಳು, ಫೀಡರ್‌ಗಳು ಮತ್ತು ವಿತರಣಾ ಪರಿವರ್ತಕಗಳಿಗೆ ಮಾಪಕ ಅಳವಡಿಕೆ, ವಿತರಣಾ ಪರಿವರ್ತಕಗಳ ಮಾಪಕ ಓದುವಿಕೆ, ಗ್ರಾಹಕ ಸೂಚ್ಯಂಕ ಹಾಗೂ ಗ್ರಾಹಕರ ಸ್ಥಾವರಗಳಿಗೆ ವಿದ್ಯುತ್ ನಿಲುಗಡೆ ಮಾಡುವ ಕಾರ್ಯದಲ್ಲಿ ಹು.ವಿ.ಸ.ಕಂಪನಿಯೊಂದಿಗೆ ಸಹಕರಿಸುವುದು.

5. ವಿದ್ಯುತ್ ಸರಬರಾಜು ಸಂಬಂಧಿತ ದೂರುಗಳಿದ್ದಲ್ಲಿ, ಗ್ರಾಹಕರಿಗೆ ಸೇವಾ ಕೇಂದ್ರದ ದೂರವಾಣಿ ಸಂಖ್ಯೆಯನ್ನು ನೀಡುವುದು.
6. ಅನಧಿಕೃತ ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸಲು ಸಹಕರಿಸುವುದು.
7. ಅಪಾಯಕಾರಿ ಸ್ಥಾವರಗಳ ಸ್ಥಳಗಳನ್ನು ಪತ್ತೆ ಹಚ್ಚಲು ಸಹಕರಿಸುವುದು.
8. ಹಳೆಯ/ಹಾಳಾಗಿರುವ [ಎಮ್.ಎನ್.ಆರ್]/ದೋಷಪೂರಿತ ಮಾಪಕಗಳನ್ನು ಗುರುತಿಸಿ, ಉತ್ತಮ ಮಾಪಕಗಳಿಗೆ ಬದಲಾಯಿಸಲು ಅನುಕೂಲವಾಗುವಂತೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸಲ್ಲಿಸುವುದು.
9. ಬೀದಿ ದೀಪ ಮತ್ತು ಎಲ್.ಟಿ ಪ್ರವರ್ಗದ ನೀರು ಸರಬರಾಜು ಸ್ಥಾವರಗಳ ಮಾಪಕ ಓದುವುದು ಹಾಗೂ ಬಿಲ್ ವಿತರಿಸುವುದು.
10. ಬೀದಿ ದೀಪ, ನೀರು ಸರಬರಾಜು ಹಾಗೂ ನೀರಾವರಿ ಪಂಪ್ ಸೆಟ್‌ಗಳಿಗೆಂದೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕಗಳ ಓದುವಿಕೆ ಹಾಗೂ ಮಾಪಕ ಓದುವಿಕೆಯಲ್ಲಿ ಯಾವುದೇ ವ್ಯತ್ಯಾಸಗಳು ಕಂಡು ಬಂದಲ್ಲಿ ವರದಿಯನ್ನು ಉಪವಿಭಾಗ ಕಛೇರಿಗೆ ವರದಿ ಮಾಡುವುದು.
11. ತಮಗೆ ಒದಗಿಸಿರುವ ಗುರುತು ಪಟ್ಟಿ/ಬ್ಯಾಡ್ಜ್ ಧರಿಸಿ ಕಂಪನಿಯ ಕರ್ತವ್ಯ ನಿರ್ವಹಿಸತಕ್ಕದ್ದು. ಈ ಗುರುತು ಪಟ್ಟಿ/ ಬ್ಯಾಡ್ಜ್ ಅನ್ನು ಸುಸ್ಥಿಯಲ್ಲಿ ಇರಿಸಿಕೊಳ್ಳತಕ್ಕದ್ದು. ಈ ನಿಟ್ಟಿನಲ್ಲಿ ಒದಗಿಸಿರುವ ಅವಕಾಶಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗಳು ದುರುಪಯೋಗ ಪಡಿಸಿಕೊಳ್ಳಕ್ಕದ್ದಲ್ಲ.
12. ಯಾವುದೇ ಕಾರಣಕ್ಕೆ ಸ್ಥಾವರದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದಾಗ ಅಂತಹ ಸ್ಥಾವರದ ಮಾಪಕದಲ್ಲಿ ದಾಖಲಾಗಿರುವ ಅಂತಿಮ ರೀಡಿಂಗನ್ನು ಆರ್.ಆರ್ ಸಂಖ್ಯೆ ಅನುಸಾರ ದಾಖಲಿಸಿಕೊಂಡು, ಹುವಿಸಕಂನಿಯು ನಿಗದಿ ಪಡಿಸಿರುವ ನಮೂನೆಯ ಪ್ರಕಾರ ಮಾಹಿತಿಯನ್ನು ಸಲ್ಲಿಸುವುದು.
13. ವಿದ್ಯುತ್ ಸರಬರಾಜು ಕಂಪನಿಯು ಕಾಲ-ಕಾಲಕ್ಕೆ ಪ್ರಕಟಿಸುವ ಸುರಕ್ಷತಾ ವಿಧಾನಗಳ ಕುರಿತು ಸಾಮಾನ್ಯ ಜನತೆಗೆ ಅರಿವು ಮೂಡಿಸುವುದು.
14. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಇಚ್ಛಿಸುವ ಸಾರ್ವಜನಿಕರಿಗೆ ಸೂಕ್ತ ಸಹಾಯ/ಮಾರ್ಗದರ್ಶನ ನೀಡಿ, ವಿದ್ಯುತ್ ಸಂಪರ್ಕ ಪಡೆಯಲು ಅನುಸರಿಬೇಕಾದ ಕಂಪನಿಯ ನಿಯಮಗಳ ಬಗ್ಗೆ ಮಾಹಿತಿ ನೀಡುವುದು.
15. ಹು.ವಿ.ಸ.ಕಂಪನಿಯು ಪ್ರತಿ ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಒಂದು ಆಂಡ್ರಾಯ್ಡ್ ಸ್ಮಾರ್ಟ್ ಫೋನ್/ಸ್ಪಾಟ್ ಬಿಲ್ಲಿಂಗ್ ಮಷಿನ್ [ಎಸ್.ಬಿ.ಎಮ್] ನ್ನು ಒದಗಿಸುವುದು. ಆಂಡ್ರಾಯ್ಡ್ ಸ್ಮಾರ್ಟ್ ಫೋನ್/ ಸ್ಪಾಟ್ ಬಿಲ್ಲಿಂಗ್ ಮಷೀನನ್ನು ನಿರ್ವಹಿಸುವಲ್ಲಿ ಯಾವುದೇ ನಿರ್ಲಕ್ಷತೆ ತೋರಿ, ಕಳೆದು ಹೋದಲ್ಲಿ/ನಿಷ್ಕ್ರೀಯವಾದಲ್ಲಿ ಸಂಪೂರ್ಣ ವೆಚ್ಚ/ದುರಸ್ತಿ ವೆಚ್ಚವನ್ನು ಸಂಬಂಧಪಟ್ಟ ಎಮ್.ಎಫ್.ಎಫ್ ಭರಿಸಬೇಕು.
16. ಎಮ್.ಎಫ್.ಎಫ್ ಆಗಿ ಕಾರ್ಯನಿರ್ವಹಿಸುವ ವ್ಯಕ್ತಿಯು, ತನಗೆ ವಹಿಸಿರುವ ಕಾರ್ಯ ವ್ಯಾಪ್ತಿಯಲ್ಲಿ ತನ್ನ ಕಾರ್ಯನಿರ್ವಹಣೆಗಾಗಿ ತನ್ನ ಅಧೀನದಲ್ಲಿ ಉಪ ಏಜೆಂಟ್/ಡೀಲರ್ ಗಳನ್ನು ನೇಮಕ ಮಾಡಿಕೊಳ್ಳುವಂತಿಲ್ಲ. ಈ ರೀತಿಯ ನೇಮಕಾತಿ ಮಾಡಿರುವುದು ಗಮನಕ್ಕೆ ಬಂದಲ್ಲಿ ಎಮ್.ಎಫ್.ಎಫ್ ರವರನ್ನು ಯಾವುದೇ ನೋಟಿಸ್ ನೀಡದೇ ಅವರ ನೇಮಕಾತಿಯನ್ನು ರದ್ದು ಪಡಿಸಲಾಗುವುದು.
17. ಎಮ್.ಎಫ್.ಎಫ್ ರವರುಗಳು ಯಾವುದೇ ಸರ್ಕಾರಿ/ ಅರೇ ಸರ್ಕಾರಿ/ಸ್ಥಳೀಯ ಸಂಸ್ಥೆ/ರಾಜಕೀಯ ಸಂಸ್ಥೆಗಳಲ್ಲಿ ಯಾವುದೇ ಹುದ್ದೆ/ಸ್ಥಾನ ಹೊಂದಿರತಕ್ಕದ್ದಲ್ಲ.

**ಕನಿಷ್ಠ ಖಚಿತ ಪ್ರೋತ್ಸಾಹ ಧನ :**

1. ಮೈಕ್ರೋ ಫೀಡರ್ ಫ್ರಾಂಚೈಸಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹ ನೀಡಲಾಗುವುದು. ಪ್ರತಿ ತಿಂಗಳು ಎಲ್ಲ ಪ್ರವರ್ಗದ ಗ್ರಾಹಕರ ಮಾಪಕಗಳನ್ನು ಓದಿ, ಶೇಕಡಾ 100 ರಷ್ಟು ಬಿಲ್ ವಿತರಣೆ ಮಾಡಿ, ಹುವಿಸಕಂನಿ ನಿಗದಿಪಡಿಸಿರುವ ಮಾಸಿಕ ಮೂಲ ಗುರಿಯನ್ನು ಸಾಧಿಸಿದಲ್ಲಿ ಮೈಕ್ರೋ ಫೀಡರ್ ಫ್ರಾಂಚೈಸಿಗೆ ರೂ. 12,000/- ನ್ನು "ಕನಿಷ್ಠ ಖಚಿತ ಪ್ರೋತ್ಸಾಹ ಧನ"ವಾಗಿ ನೀಡಲಾಗುವುದು.

   ಹುವಿಸಕಂನಿಯು ಕಾಲ ಕಾಲಕ್ಕೆ ನಿಗದಿಪಡಿಸಿದ ಬೇಸ್ ಲೈನ್ ಗುರಿಯ ವಸೂಲಾತಿಗೆ ಸಾಧಿಸಿದಲ್ಲಿ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.

   a) ಎಲ್.ಟಿ-1 [40 ಯೂನಿಟ್ ಗಳಿಗೆ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-2, ಎಲ್.ಟಿ-3, ಎಲ್.ಟಿ-4 [10 ಹೆಚ್.ಪಿ ಗಿಂತ ಮೇಲ್ಪಟ್ಟ ಸ್ಥಾವರಗಳು], ಎಲ್.ಟಿ-5, [40 ಹೆಚ್.ಪಿ ಸಾಮರ್ಥ್ಯದವರೆಗೆ] ಸ್ಥಾವರಗಳ ಪ್ರಸಕ್ತ ತಿಂಗಳಿನ ಬೇಡಿಕೆಯ ಶೇಕಡಾ 100 ರಷ್ಟು ವಸೂಲಾತಿ ಮಾಡಿದಲ್ಲಿ ಕನಿಷ್ಠ ಖಚಿತ ಪ್ರೋತ್ಸಾಹ ಧನದ ಜೊತೆಗೆ ರೂ. 2000/- [ರೂಪಾಯಿಗಳು: ಎರಡು ಸಾವಿರ ಮಾತ್ರ] ವನ್ನು ನೀಡಲಾಗುವುದು.

   b) ಒಪ್ಪಂದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವದಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಷ್ಟು ವಸೂಲಿ ಮಾಡಿದಲ್ಲಿ ರೂ. 1000/- [ರೂಪಾಯಿ: ಒಂದು ಸಾವಿರ ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

   c) ಒಪ್ಪಂದ ಅವಧಿ ಹೊರತುಪಡಿಸಿ, ಹಿಂದಿನ ದೀರ್ಘಾವಧಿ ವಿದ್ಯುತ್ ಕಡಿತಗೊಂಡ ಸ್ಥಾವರಗಳ ಒಟ್ಟು ಬಾಕಿ ಮೊತ್ತದ ಶೇಕಡಾ 50 ರಿಂದ 100 ರವರೆಗೆ ಹೆಚ್ಚು ಮೊತ್ತವನ್ನು ವಸೂಲಿ ಮಾಡಿದಲ್ಲಿ, ರೂ. 1500/- [ರೂಪಾಯಿ : ಒಂದು ಸಾವಿರದಾ ಐನೂರು ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನವನ್ನಾಗಿ ನೀಡಲಾಗುವುದು.

2. ಎಮ್.ಎಫ್.ಎಫ್ ತನ್ನ ವ್ಯಾಪ್ತಿಯಲ್ಲಿನ ಎಲ್ಲ ಗ್ರಾಹಕರ ಅಧಿಕ ಭದ್ರತಾ ಠೇವಣಿ [ಎ.ಎಸ್.ಡಿ] ಯನ್ನು ಮೂರು ತಿಂಗಳಲ್ಲಿ ವಸೂಲಿ ಮಾಡಿದಲ್ಲಿ ರೂ. 500/-[ರೂಪಾಯಿ : ಐದು ನೂರು ಮಾತ್ರ] ನ್ನು ಹೆಚ್ಚುವರಿ ಪ್ರೋತ್ಸಾಹ ಧನ ನೀಡಲಾಗುವುದು.

3. ಎಮ್.ಟಿ ವಿಭಾಗ/ಜಾಗೃತದಳದಿಂದ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಇತರೆ ಯಾವುದೇ ಪರಿಶೋಧಿತ ಕಡಿಮೆ ಬೇಡಿಕೆ [Audit Short Claim] ಯಿಂದಾಗಿ ವಿಧಿಸಿದ ಹಿಂಬಾಕಿ ಶುಲ್ಕ ವಸೂಲಾತಿ, ಸರ್ಕಾರದ ಹೊಂದಾಣಿಕೆಗಳನ್ನು ಮೈಕ್ರೋ ಫೀಡರ್ ಫ್ರಾಂಚೈಸಿಗೆ ನೀಡಬೇಕಾದ ಪ್ರೋತ್ಸಾಹ ಧನ ಲೆಕ್ಕಾಚಾರಕ್ಕೆ ಪರಿಗಣಿಸಲಾಗುವುದಿಲ್ಲ.

4. ಹೆಚ್ಚುವರಿ ಪ್ರೋತ್ಸಾಹ ಧನವನ್ನು ಲೆಕ್ಕಿಸುವಾಗ ಒಪ್ಪಂದದ ಅವಧಿಯಲ್ಲಿ ಸಂಗ್ರಹಿಸಿರುವ ಬಾಕಿಯನ್ನು ಪರಿಗಣಿಸಲಾಗುವುದಿಲ್ಲ.

5. ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸರಬರಾಜು ಮಾಡುವುದಕ್ಕಾಗಿಯೇ ಮೀಸಲಿಟ್ಟ ವಿತರಣಾ ಪರಿವರ್ತಕಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- ನ್ನು ಪಾವತಿಸಲಾಗುವುದು.

6. ಕುಡಿಯುವ ನೀರಿನ ಸ್ಥಾವರಗಳು ಮತ್ತು ಬೀದಿ ದೀಪ ಸ್ಥಾವರಗಳ ಮಾಪಕ ಓದುವುದಕ್ಕೆ ಪ್ರತಿ ಸ್ಥಾವರಕ್ಕೆ ರೂ. 25/- ನ್ನು ಪಾವತಿಸಲಾಗುವುದು.

7. ವಿತರಣಾ ಪರಿವರ್ತಕಗಳಿಗೆ ಮಾಪಕವನ್ನು ಅಳವಡಿಸಿದಲ್ಲಿ, ಕಾರ್ಯ ಸಾಧನೆ ಮಾನದಂಡವನ್ನು [Input Energy] ಆಧಾರದಲ್ಲಿ ಮಾರ್ಪಾಡು ಮಾಡಲಾಗುವುದು. ಈ ನಿಟ್ಟಿನಲ್ಲಿ ಹುವಿಸಕಂನಿಯು ಕಾರ್ಯಸಾಧನೆ ಅಳತೆ ಹಾಗೂ ಪ್ರೋತ್ಸಾಹ/ದಂಡ ನೀಡಲು ಸೂಕ್ತ ವಿಧಾನವನ್ನು ರೂಪಿಸುತ್ತದೆ, ಅದರಂತೆ ಪ್ರೋತ್ಸಾಹ ಧನವನ್ನು ನಿಗದಿಪಡಿಸಲಾಗುವುದು.
8. ಮಾಪಕ ಓದುವ ಸಮಯದಲ್ಲಿ ಪತ್ತೆ ಹಚ್ಚುವ ಅನಧಿಕೃತ/ವಿದ್ಯುತ್ ಕಳ್ಳತನದ ಪ್ರಕರಣಗಳನ್ನು ಶಾಖಾಧಿಕಾರಿಯವರಿಗೆ ವರದಿ ಮಾಡಿದಲ್ಲಿ ರೂ. 150/- ನ್ನು ಪ್ರೋತ್ಸಾಹ ಧನ ನೀಡಲಾಗುವುದು.
9. ಅನಧಿಕೃತ ನೀರಾವರಿ ಪಂಪ್ ಸೆಟ್‌ಗಳು ಹಾಗೂ ಕುಡಿಯುವ ನೀರಿನ ಸ್ಥಾವರಗಳನ್ನು ಸಕ್ರಮಗೊಳಿಸಲು ಸಹಕರಿಸಿದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 100/- ನ್ನು ಪ್ರೋತ್ಸಾಹ ಧನ ನೀಡಲಾಗುವುದು.
10. Mobile Cash Collection [MCC] ಮೂಲಕ ಮಾಡುವ "ಪ್ರತಿ" ವ್ಯವಹಾರಕ್ಕೆ ಕೆಳಗಿನಂತೆ ಹೆಚ್ಚುವರಿ ಪ್ರೋತ್ಸಾಹ ಧನವನ್ನು ನೀಡಲಾಗುವುದು.
    a) ಒಟ್ಟು ಸ್ಥಾವರಗಳಲ್ಲಿ ಶೇಕಡಾ 25 ರಿಂದ 50 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 1.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.
    b) ಒಟ್ಟು ಸ್ಥಾವರಗಳಲ್ಲಿ ಶೇಕಡಾ 50 ರಿಂದ 75 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.
    c) ಒಟ್ಟು ಸ್ಥಾವರಗಳಲ್ಲಿ ಶೇಕಡಾ 75 ರಿಂದ 90 ರವರೆಗೆ ನೀಡಿದ ಪ್ರತಿ ರಶೀದಿಗೆ ರೂ. 2.50/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.
    d) ಒಟ್ಟು ಸ್ಥಾವರಗಳಲ್ಲಿ ಶೇಕಡಾ 90 ರಷ್ಟಕ್ಕಿಂತ ಮೇಲ್ಪಟ್ಟು ನೀಡಿದ ಪ್ರತಿ ರಶೀದಿಗೆ ರೂ. 3.00/- ರಷ್ಟು ಮೊತ್ತವನ್ನು ಪಾವತಿಸಲಾಗುವುದು.
11. ತನ್ನ ಮೂಲ ಗ್ರಾಮ ಪಂಚಾಯತಿಯಿಂದ ಬೇರೆ ಗ್ರಾಮ ಪಂಚಾಯತಿ ವ್ಯಾಪ್ತಿಗೆ ವರ್ಗಾವಣೆ ಮಾಡಿದಲ್ಲಿ ರೂ. 3000/- ಗಳನ್ನು One Time Payment ರೂಪದಲ್ಲಿ ನೀಡಲಾಗುವುದು.
12. ಕಾರ್ಯನಿರ್ವಹಿಸುವ ಸಮಯದಲ್ಲಿ, ಮಾರಣಾಂತಿಕವಲ್ಲದ [Non-Fatal] ಅಪಘಾತಕ್ಕೊಳಗಾದರೆ, ಮಾನವೀಯತೆಯ ದೃಷ್ಟಿಯಿಂದ ಗರಿಷ್ಟ ರೂ. 5000/- [ರೂಪಾಯಿ : ಐದು ಸಾವಿರಗಳು ಮಾತ್ರ] ಅಥವಾ ವೈದ್ಯಕೀಯ ವೆಚ್ಚ, ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು, ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚೈಸಿಯು ಕಾರ್ಯನಿರ್ವಹಿಸುವ ಸಮಯದಲ್ಲಿ ಅಪಘಾತದಿಂದ ಮರಣ ಹೊಂದಿದರೆ, ರೂ. 2,00,000/- [ರೂಪಾಯಿ : ಎರಡು ಲಕ್ಷ ಮಾತ್ರ] ಗಳನ್ನು ಪರಿಹಾರ ನೀಡಲಾಗುವುದು.

**ದಂಡ :**

1. ಮೈಕ್ರೋ ಫೀಡರ್ ಫ್ರಾಂಚೈಸಿಯು ಶೇಕಡಾ 100 ರಷ್ಟು ಬಿಲ್ ವಿತರಿಸದಿದ್ದಲ್ಲಿ ಹಾಗೂ ಕನಿಷ್ಟ ಮೂಲ ವಸೂಲಾತಿ ಗುರಿಯನ್ನು ಸಾಧಿಸದಿದ್ದಲ್ಲಿ ಅವರಿಗೆ ನೀಡುವ ರೂ. 12,000/- ಗಳ "ಕನಿಷ್ಟ ಖಚಿತ ಪ್ರೋತ್ಸಾಹ ಧನ"ದಲ್ಲಿ ಶೇಕಡಾ 5 ರಷ್ಟನ್ನು ದಂಡದ ರೂಪದಲ್ಲಿ ವಿಧಿಸಿ, ಕಡಿತಗೊಳಿಸಲಾಗುವುದು.
2. ಒಂದು ವೇಳೆ ತಪ್ಪು ರೀಡಿಂಗ್‌ನ್ನು ಸಲ್ಲಿಸಿದಲ್ಲಿ, ಒಪ್ಪಂದನ್ನು ರದ್ದು ಪಡಿಸಲಾಗುವುದು ಹಾಗೂ ಎಮ್.ಎಫ್.ಎಫ್ ಕೆಲಸದಿಂದ ಕಾರ್ಯವಿಮುಕ್ತಿಗೊಳಿಸಲಾಗುವುದು.
3. ಮೈಕ್ರೋ ಫೀಡರ್ ಫ್ರಾಂಚೈಸಿಯು ಬೀದಿ ದೀಪ ಹಾಗೂ ನೀರು ಸರಬರಾಜು ಸ್ಥಾವರಗಳ ಮಾಪಕವನ್ನು ಓದದಿದ್ದಲ್ಲಿ, ಪ್ರತಿ ಸ್ಥಾವರಕ್ಕೆ ರೂ. 20/- [ರೂಪಾಯಿ : ಇಪ್ಪತ್ತು ಮಾತ್ರ] ರ

ದಂಡವನ್ನು ವಿಧಿಸಿ, ಎಮ್.ಎಫ್.ಎಫ್ ಗೆ ನೀಡಬೇಕಾದ ಪ್ರೋತ್ಸಾಹ ಧನದಲ್ಲಿ ಕಡಿತಗೊಳಿಸಲಾಗುವುದು.

4. ಮಾಪಕ ಓದಿದ ಸ್ಥಾವರಗಳ ವಿವರಗಳನ್ನು ಅದೇ ದಿನ ಗಣಕಯಂತ್ರ [Computer] ನಲ್ಲಿ ಅಪ್ಲೋಡ್ ಮಾಡದಿದ್ದಲ್ಲಿ, ಪ್ರತಿ ದಿನಕ್ಕೆ ರೂ. 10/- ರ ದಂಡವನ್ನು ವಿಧಿಸಲಾಗುವುದು.
5. ಮಾಪಕ ಓದುವಿಕೆಯನ್ನು ಪ್ರತಿ ತಿಂಗಳ 15 ನೇ ದಿನಾಂಕದೊಳಗೆ ಪೂರ್ಣಗೊಳಿಸದಿದ್ದಲ್ಲಿ, ದಿನಾಂಕ 16 ರಿಂದ ಪ್ರತಿ ದಿನಕ್ಕೆ ರೂ. 100/- ರ ದಂಡವನ್ನು ವಿಧಿಸಲಾಗುವುದು.

**ತಿಳುವಳಿಕೆ ಒಡಂಬಡಿಕೆಯನ್ನು ರದ್ದು ಮಾಡುವುದು** :

1. ಈ ಒಪ್ಪಂದದ ಅವಧಿಯು ಒಂದು ವರ್ಷದ್ದಾಗಿರುತ್ತದೆ. ಇಂತಹ ಅವಧಿ ಪೂರ್ವ ಒಪ್ಪಂದದ ರದ್ಧತಿಯಿಂದಾಗಿ ಸಂಬಂಧಪಟ್ಟ ಎಮ್.ಎಫ್.ಎಫ್ ಗೆ ಯಾವುದೇ ಪರಿಹಾರ ನೀಡತಕ್ಕದ್ದಲ್ಲ.
2. ಅಧಿಕ ವ್ಯಾಪ್ತಿಯ ಪ್ರದೇಶದಲ್ಲಿ ಹುವಿಸಕಂನಿಯು ತನ್ನ ಕಾರ್ಯಚರಣೆಯ ಜವಾಬ್ದಾರಿಯನ್ನು ಹೊರಗಿನ ಏಜೆನ್ಸಿಗೆ ಜವಾಬ್ದಾರಿ ವಹಿಸುವ ಪ್ರಕರಣಗಳಲ್ಲಿ ಒಪ್ಪಂದವನ್ನು ರದ್ದು ಪಡಿಸುವುದು.
3. ಗ್ರಾಹಕರಿಂದ ವಸೂಲಿ ಮಾಡಿದ ಹಣವನ್ನು ನಿಗದಿತ ಸಮಯದೊಳಗೆ ಸಂದಾಯ ಮಾಡದಿದ್ದಲ್ಲಿ ಒಪ್ಪಂದ ರದ್ದು ಪಡಿಸಲಾಗುವುದು.
4. ವಸೂಲಾತಿಯಲ್ಲಿ ಸತತ 3 ತಿಂಗಳು ಪ್ರತಿ ತಿಂಗಳ ಕಂದಾಯ ವಸೂಲಾತಿ ಗುರಿ ಮುಟ್ಟಲು ವಿಫಲವಾದರೆ ಒಪ್ಪಂದ ರದ್ದು ಪಡಿಸಲಾಗುವುದು.
5. ಎಮ್.ಎಫ್.ಎಫ್ ರವರು ಈ ಒಪ್ಪಂದದ ಒಡಂಬಡಿಕೆಯಲ್ಲಿನ ಯಾವುದೇ ಷರತ್ತು ಹಾಗೂ ನಿಬಂಧನೆಗಳನ್ನು ಪಾಲಿಸಲು ಅಥವಾ ಕಾರ್ಯನಿರ್ವಹಿಸಲು ವಿಫಲರಾದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
6. ದುರ್ನಡತೆ ಮತ್ತು ಲಂಚ/ರುಷುವತ್ತುಗಳಲ್ಲಿ ನಿರತನಾಗಿದ್ದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
7. ಮೈಕ್ರೋ ಫೀಡರ್ ಫ್ರಾಂಚೈಸಿಯು ಗ್ರಾಹಕರೊಡನೆ ಸೌಜನ್ಯತೆಯಿಂದ ನಡೆದುಕೊಳ್ಳದ ಬಗ್ಗೆ ದೂರುಗಳು ಬಂದರೆ ಒಡಂಬಡಿಕೆಯನ್ನು ರದ್ದುಗೊಳಿಸಲಾಗುವುದು.
8. ಯಾವುದೇ ಕಾರಣದಿಂದಾಗಿ ಎಮ್.ಎಫ್.ಎಫ್ ನೊಂದಿಗೆ ಒಪ್ಪಂದವು ರದ್ದುಗೊಂಡಲ್ಲಿ, ಹುವಿಸಕಂನಿಗೆ ಸಂಬಂಧಿತ ದಾಖಲೆಗಳು, ಭಾಗಶಃ ಉಪಯೋಗಿಸಿದ/ಉಪಯೋಗಿಸಿಲ್ಲದ ರಶೀದಿ ಪುಸ್ತಕಗಳು, ನಮೂನೆಗಳು ಹಾಗೂ ಇತರೆ ದಾಖಲಾತಿಗಳನ್ನು ಹುವಿಸಕಂನಿಗೆ ಹಿಂತಿರುಗಿಸತಕ್ಕದ್ದು.
9. ಒಂದು ವೇಳೆ ಎಮ್.ಎಫ್.ಎಫ್ ರವರು ಕಂಪನಿಗೆ ನಷ್ಟ/ಹಾನಿ ಮಾಡಿದಲ್ಲಿ, ಎಮ್.ಎಫ್.ಎಫ್ ಗಳ ಮೇಲೆ ಕಾನೂನು ರೀತಿಯ ಕ್ರಮ ಕೈಗೊಳ್ಳುವುದಲ್ಲದೇ, ಬ್ಯಾಂಕ್ ಖಾತ್ರಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಹಕ್ಕು ಹೊಂದಿರುತ್ತದೆ.

**ಅರ್ಜಿ ಸಲ್ಲಿಸಲು ಅಭ್ಯರ್ಥಿಗಳಿಗೆ ಸೂಚನೆ** :

ಆಸಕ್ತ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯೊಂದಿಗೆ ಈ ಕೆಳಗಿನ ದಾಖಲೆ/ವಿವರಗಳನ್ನು ಸಲ್ಲಿಸಬೇಕು.

1. ಡಿ.ಡಿ ಮೊತ್ತ ರೂ. 250/- + 18% GST ( ರೂ.250+45=295) ಯನ್ನು Superintending Engineer(Ele.), O & M Circle, HESCOM, Bagalkot ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕ್ ನಲ್ಲಿ ತೆಗೆದು ಲಗತ್ತಿಸುವುದು.
2. ಸಂಬಂಧಿಸಿದ ಗ್ರಾಮ ಪಂಚಾಯಿತಿಯಿಂದ ವಾಸಸ್ಥಾನದ ರಹವಾಸಿ ಪ್ರಮಾಣ ಪತ್ರ.
3. ವಿದ್ಯಾರ್ಹತೆಯ ಬಗೆಗೆ ಪ್ರಮಾಣಿತ [ದೃಢೀಕೃತ] ದಸ್ತಾವೇಜುಗಳು.
4. ಭರ್ತಿಯಾದ ಅರ್ಜಿಗಳನ್ನು ಮೇಲಿನ ವಿವರಗಳೊಂದಿಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 16-08-2021 ರ ಸಾಯಂಕಾಲ 4.30 ಘಂಟೆಯೊಳಗೆ ಅಭ್ಯರ್ಥಿಯು ಅರ್ಜಿಯನ್ನು ಅಂಚೆ ನೋಂದಣಿ ಸ್ವೀಕೃತಿ ಪೋಸ್ಟ್ ಮುಖಾಂತರ ತಲುಪುವಂತೆ ಸಲ್ಲಿಸಲು ಸೂಚಿಸಲಾಗಿದೆ. (Register Post with ACK)
5. ಕೊನೆಯ ದಿನಾಂಕದ ನಂತರ ಮುಟ್ಟಿದ ಹಾಗೂ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
6. 2 ಪಾಸ್ ಪೋರ್ಟ ಅಳತೆಯ ಭಾವ ಚಿತ್ರಗಳು ಹಾಗೂ ಆಧಾರ ಕಾರ್ಡ್/ಪಾನ್ ಕಾರ್ಡ್ (ಕಚೇರಿ ಅಚೆಡಿಜ).
7. ಜನ್ಮ ದಿನಾಂಕದ ನಿಖರತೆಗಾಗಿ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ.
8. "ಅರ್ಹ ಅಭ್ಯರ್ಥಿಗಳನ್ನು ದ್ವಿತೀಯ ಪಿ.ಯು.ಸಿ ಅಥವಾ ತತ್ಸಮಾನ ವಿದ್ಯಾರ್ಹತೆ ಮೆರಿಟ್ ಆಧಾರದ ಮೂಲಕ ಆಯ್ಕೆ ಮಾಡಲಾಗುವುದು."
9. ಅರ್ಹ ಅಭ್ಯಥಿಗಳು ಮೂಲ ದಾಖಲಾತಿಗಳ ಪರಿಶೀಲನೆಗೆ ದಿನಾಂಕ: 19-08-2021 ಬೆಳಿಗ್ಗೆ: 10:00 ಘಂಟೆಗೆ ಈ ಕೆಳಗಿನ ವಿಳಾಸಕ್ಕೆ ಹಾಜರಾಗುವುದು.
10. ಅರ್ಜಿ ದೊರೆಯುವ ಸ್ಥಳ : **Web Site : hescom.karnataka.gov.in**
11. ವೆಬ್‌ಸೈಟನಲ್ಲಿ.

**ಅರ್ಜಿ ಸಲ್ಲಿಸುವ ವಿಳಾಸ :-** ( **ಕಛೇರಿ ಸಮಯದಲ್ಲಿ ಮಾತ್ರ** )

| | |
|---|---|
| **ಅಧೀಕ್ಷಕ ಇಂಜನೀಯರ**(ವಿ),<br>ಕಾರ್ಯ ಮತ್ತು ಪಾಲನಾ ವೃತ್ತ,<br>ಹುವಿಸಕಂನಿ, ಸೆಕ್ಟರ ನಂ 06 ರಸ್ತೆ ನಂ 06<br>ನವನಗರ ಬಾಗಲಕೋಟ | **Superintending Engineer(Ele),**<br>O & M Circle, HESCOM, Sector No 6<br>Rode No 06 Nava Nagar Bagalkot |

ಅಧೀಕ್ಷಕ ಇಂಜನೀಯರ(ವಿ),
ಕಾರ್ಯ ಮತ್ತು ಪಾಲನಾ ವೃತ್ತ, ಹುವಿಸಕಂನಿ,
ಸೆಕ್ಟರ ನಂ 06 ರಸ್ತೆ ನಂ 06 ನವನಗರ ಬಾಗಲಕೋಟ

# ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಹು.ವಿ.ಕಂ.) ಹುಬ್ಬಳ್ಳಿ

## ("ಮೈಕ್ರೋ ಫೀಡರ್ ಫ್ರಾಂಚ್ಯಾಜಿ " ನೇಮಕ ಮಾಡಿಕೊಳ್ಳುವುದಕ್ಕೆ ಅರ್ಜಿ)

ಅರ್ಜಿ ಶುಲ್ಕ ರೂ. 250/+18% GST (ರೂ.250+45=295.00)

1. ಹೆಸರು :---------------------------
2. ವಾಸಸ್ಥಾನದ ವಿಳಾಸ :---------------------------
---------------------------
3. ಜನ್ಮ ದಿನಾಂಕ :---------------------------
4. ವಿದ್ಯಾರ್ಹತೆಗಳು :---------------------------
---------------------------
---------------------------
5. ಆಧಾರ ಸಂಖ್ಯೆ :---------------------------
6. ಅರ್ಜಿ ಸಲ್ಲಿಸುವ ಗ್ರಾಮ ಪಂಚಾಯಿತಿ ಹೆಸರು ---------------------------
7. ಬ್ಯಾಂಕ್‌ನ ವಿವರ
   1. ಹೆಸರು :-----------------------
   2. ಮೊತ್ತ :-----------------------
   3. ಡಿ.ಡಿ. ಸಂಖ್ಯೆ/ ದಿನಾಂಕ :-----------------------
8. ಮೊಬೈಲ್ ಸಂಖ್ಯೆ : -----------------------

"ಮೇಲೆ ನಮೂದಿಸಿದ ವಿಷಯಗಳು ನನಗೆ ತಿಳಿದ ಮಟ್ಟಿಗೆ ನಿಜವಾಗಿರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ. ಒಂದು ವೇಳೆ ಮೈಕ್ರೋ ಫೀಡರ್ ಫ್ರಾಂಚ್ಯಾಜಿಯಾಗಿ ಆರಿಸಲ್ಪಟ್ಟರೆ ನಾನು ಆ ಗ್ರಾಮ ಪಂಚಾಯಿತಿಯಲ್ಲಿ "ದಿನನಿತ್ಯ ವಸೂಲಿ ಮಾಡುತ್ತಿರುವ ಕಂದಾಯ ವಸೂಲಾತಿ ಪ್ರಮಾಣವನ್ನು ಆಧರಿಸಿ, ಬ್ಯಾಂಕ್ ಖಾತರಿ ಹಣವನ್ನು ಕನಿಷ್ಠ ರೂ. 50,000/- ಅಥವಾ ಗರಿಷ್ಠ 5 ದಿನಗಳ ತಿಂಗಳಿನ ನಿತ್ಯ ಸರಾಸರಿ ಕಂದಾಯ ವಸೂಲಾತಿ ಪ್ರಮಾಣ," ಇವೆರಡರಲ್ಲಿ ಯಾವುದು ಹೆಚ್ಚಿರುವುದೋ, ಅದಕ್ಕೆ ಸಮನಾಗಿ ಬ್ಯಾಂಕ್ ಖಾತರಿ (Bank Guarantee) ಹಣವನ್ನು ಕಂಪನಿಯಲ್ಲಿ ಸಂದಾಯ ಮಾಡಲು ಒಪ್ಪುತ್ತೇನೆ.

ಅಭ್ಯರ್ಥಿಯ ಸಹಿ,

ಸ್ಥಳ :

ದಿನಾಂಕ :

**ಅಭ್ಯರ್ಥಿಗಳಿಗೆ ಸೂಚನೆ :**

1. ಇದು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿಯಲ್ಲಿ ಉದ್ಯೋಗ / ನೌಕರಿ/ಕೆಲಸದ/ ನೇಮಕಾತಿಯ ಅರ್ಜಿ ಅಲ್ಲ. ಅರ್ಜಿಯ ಜೊತೆಗೆ ಈ ಕೆಳಗೆ ಸಮೂದಿಸಿರುವ ಪ್ರಮಾಣ ಪತ್ರಗಳ ಝುರಾಕ್ಸ ಪ್ರತಿಯನ್ನು (ಸ್ವಯಂ ದೃಡೀಕೃತ) ಲಗತ್ತಿಸುವುದು. ಇತ್ತೀಚಿನ ಒಂದು ಪಾಸ್‌ಪೋರ್ಟ್ ಅಳತೆಯ ಫೋಟೋವನ್ನು ಈ ಅರ್ಜಿಗೆ ಅಂಟಿಸಬೇಕು.
   1. ವಿದ್ಯಾರ್ಹತೆಯ ಪ್ರಮಾಣ ಪತ್ರ,
   2. ಸಂಬಂಧಿಸಿದ ಗ್ರಾಮ ಪಂಚಾಯಿತಿಯ ಶಿಫಾರಸು ಪ್ರಮಾಣ ಪತ್ರ
   3. ಜನ್ಮ ದಿನಾಂಕದ ನಿಖರತೆಗಾಗಿ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ/ವರ್ಗಾವಣೆ ಪ್ರಮಾಣ ಪತ್ರ
   4. ಪಾಸ್ ಪೋರ್ಟ ಅಳತೆಯ ಭಾವಚಿತ್ರಗಳು.
   5. ಆಧಾರ ಕಾರ್ಡ.
   6. ಚುನಾವಣೆ ಗುರುತಿನ ಚೀಟಿ.
   7. ಪಾನ ಕಾರ್ಡ.
   8. ಪಡಿತರ ವಿತರಣೆ ಗುರುತಿನ ಚೀಟಿ.

2. ಸಂಪೂರ್ಣ ಮಾಹಿತಿಯು ಹೆಸ್ಕಂ ವೆಬ್ ಸೈಟಿನಲ್ಲಿ ಲಭ್ಯವಿರುತ್ತದೆ. https://hescom.karnataka.gov.in